RNU AIR DHARWAD

OCTOBER 31, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬಾಡೋಲಿಯ ಸರದಾರ, ಉಕ್ಕಿನ ಮನುಷ್ಯ ಎಂದೇ ಖ್ಯಾತಿವೆತ್ತ, ಸ್ವತಂತ್ರ ಭಾರತದ ಪ್ರಥಮ ಉಪ ಪ್ರಧಾನಮಂತ್ರಿ ಹಾಗೂ ಗೃಹ ಖಾತೆ ಸಚಿವ, ಸರ್ದಾರ ವಲ್ಲಭಭಾಯಿ ಪಟೇಲ ಅವರ, 151ನೇ ಜನ್ಮದಿನವಾದ ಇಂದು, ನಾಡಿನಾದ್ಯಂತ ರಾಷ್ಟ್ರೀಯ ಏಕತಾ ದಿನ, ಶ್ರದ್ಧೆಯಿಂದ ಆಚರಿಸಲಾಗುತ್ತಿದೆ.

<><><>

ಸರ್ದಾರ ಪಟೇಲ ಧ್ವನಿ 21 ಸೆಕೆಂದುಗಳು

<><><>

ಬೆಂಗಳೂರಿನ ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ, ರಾಷ್ಟ್ರೀಯ ಏಕತಾ ದಿನದ ಪ್ರಧಾನ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಏಕತಾ ಪ್ರತಿಜ್ಞಾ ವಿಧಿ ಬೋಧಿಸಿದರು. ರಾಷ್ಟ್ರೀಯತೆ, ಭಾರತದ ಏಕೀಕರಣ ಹಾಗೂ ಸಮಗ್ರತೆಗೆ ಸರ್ದಾರ ಪಟೇಲರು ನೀಡಿದ ಕೊಡುಗೆಗಳನ್ನು, ಸ್ಮರಿಸಿ, ಅವರ ಸ್ಮೃತಿಗೆ ಶ್ರದ್ಧಾಸುಮನ ಅರ್ಪಿಸಿದರು.

<><><>

ದೇಶದ, ಪ್ರಥಮ ಮಹಿಳಾ ಪ್ರಧಾನಮಂತ್ರಿ, ದಿವಂಗತ ಶ್ರೀಮತಿ ಇಂದಿರಾ ಗಾಂಧಿ ಅವರ, ಪುಣ್ಯತಿಥಿ ಇಂದು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಶ್ರದ್ಧಾಸುಮನ ಸಮರ್ಪಿಸಿ, ಗರೀಬಿ ಹಟಾವೋ ಘೋ ಷಣೆಯ ಮೂಲಕ ಬಡವರ, ಶೋಷಿತರ ಏಳಿಗೆಗೆ ಮಿಡಿದ ಹೃದಯವಂತ ನಾಯಕಿ, ಎಂದು ಬಣ್ಣಿಸಿದ್ದಾರೆ.

<><><>

ಕೇವಲ ಕಾಂಕ್ರೀಟ್ ಕಟ್ಟಡಗಳಲ್ಲ; ಪ್ರಕೃತಿಯ ಜೊತೆಗೆ ಹೆಜ್ಜೆ ಹಾಕುವ, ಸುಂದರ ನಗರಿಗಳನ್ನು ನಿರ್ಮಿಸೋಣ ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ನಗರಗಳ ದಿನಾಚರಣೆ.

<><><>

ವಿಜಯನಗರ ಜಿಲ್ಲೆ, ಹೂವಿನಹಡಗಲಿ ತಾಲೂಕು, ಇಟ್ಟಿಗಿ ಗ್ರಾಮದ, ಮೂರ್ತಿ ಶಿಲ್ಪಿ ಜಿ.ಬಿ. ಹಂಸಾನಂದಾಚಾರ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಜಿ.ಬಿ. ಹಂಸಾನಂದಾಚಾರ ಧ್ವನಿ 33 ಸೆಕೆಂದುಗಳು

<><><>

ಕನ್ನಡ ಕಲಿಯಲು ಉತ್ಸುಕರಾಗಿರುವ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಿಬ್ಬಂದಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅಂಚೆ ಮೂಲಕ, ಕನ್ನಡ ಶಿಕ್ಷಣ ಯೋಜನೆಯನ್ನು, 12 ತಿಂಗಳುಗಳ ಅವಧಿಗೆ ಆಯೋಜಿಸಿದೆ.

<><><>

71ನೇ ಕನ್ನಡ ರಾಜ್ಯೋತ್ಸವದ ನಿಮಿತ್ತ, ಧಾರವಾಡದ ಮನೋಹರ ಗ್ರಂಥಮಾಲೆ ಅಟ್ಟದಲ್ಲಿ, ಕನ್ನಡ ಪುಸ್ತಕ ಓದು ಸಂಸ್ಕೃತಿ ಬೆಳೆಸಲು, ವಿಶೇಷ ರಿಯಾಯಿತಿ ದರದಲ್ಲಿ, ಪುಸ್ತಕಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ ಎಂದು, ಪ್ರಬಂಧಕ ಸಮೀರ ಜೋಶಿ, ತಿಳಿಸಿದ್ದಾರೆ.

<><><>

ರಾಜ್ಯ ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ, ಬೆಳಗಾವಿಯ, ಅಶೋಕ ನಗರದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಸತಿ ನಿಲಯಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ವಸತಿ ಶಾಲೆಯಲ್ಲಿ 120 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಗುಣಮಟ್ಟದ ಆಹಾರ, ವಸತಿ ವ್ಯವಸ್ಥೆ ಇದಗಿಸುವಂತೆ, ಸೂಚಿಸಿದರು. ಸಿ.ಸಿ. ಟಿವಿ ಕ್ಯಾಮೆರಾಗಳನ್ನು, ಸುಸ್ಥಿತಿಯಲ್ಲಿ ನಿರ್ವಹಿಸುವಂತೆ, ನಿರ್ದೇಶಿಸಿದರು.

<><><>

'ಸಾಂತ್ವನ ಯೋಜನೆ' ಅಡಿ, ದೌರ್ಜನ್ಯಕ್ಕೀಡಾದ ಮಹಿಳೆಯರಿಗೆ, ತಕ್ಷಣದ ನೆರವು, ರಕ್ಷಣೆ ಹಾಗೂ ನ್ಯಾಯ ಒದಗಿಸಲಾಗುತ್ತಿದೆ ಎಂದು, ದಾವಣಗೆರೆ ಲೋಕಸಭಾ ಕ್ಷೇತ್ರದ ಸಂಸದರಾದ, ಡಾಕ್ಟರ್ ಪ್ರಭಾ ಮಲ್ಲಿಕಾರ್ಜುನ, ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ. ಸಾಂತ್ವನ ಯೋಜನೆ, ಸಂಕ ್ಟದಲ್ಲಿರುವ ಮಹಿಳೆಯರಿಗೆ, ದಿನದ 24 ಗಂಟೆ, ವಾರದ ಏಳೂ ದಿನ, ಉಚಿತ ಸಹಾಯ, ಆಪ್ತ ಸಮಾಲೋಚನೆ, ತಾತ್ಕಾಲಿಕ ಆಶ್ರಯ, ಕಾನೂನು ನೆರವು, ವೈದ್ಯಕೀಯ ಚಿಕಿತ್ಸೆ ಹಾಗೂ ಆರೈಕೆ ಮತ್ತು ಆರ್ಥಿಕ ನೆರವು ಒದಗಿಸಲಾಗುತ್ತಿದೆ ಎಂದಿದ್ದಾರೆ.

<><><>

102 ಪ್ಯಾಕೇಜ್ಡ್ ಕುಡಿಯುವ ನೀರಿನ ಘಟಕಗಳ ಪರಿಶೀಲನೆ ನಡೆಸಲಾಗಿದ್ದು, ಗಂಭೀರ ಲೋಪ ಎಸಗಿದ, 12 ಘಟಕಗಳಿಗೆ ಬೀಗ ಹಾಕಲಾಗಿದೆ ಎಂದು, ಆರೋಗ್ಯ ಖಾತೆ ಸಚಿವ ಯು.ಟಿ ಖಾದರ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಮಾಹಿತಿ ನೀಡಿ, ಲೋಪ ಕಂಡ 53 ಘಟಕಗಳಿಗೆ ನೋಟಿಸ್ ನೀಡಲಾಗಿದೆ. ದೇವನಹಳ್ಳಿಯ ಘಟಕದಲ್ಲಿ ಲೇಬಲಿಂಗ್ ದೋ ' ಹೊಂದಿದ್ದ 1 ಲೀಟರ್ ಸಾಮರ್ಥ್ಯದ 82 ಕೇಸ್ ನೀರಿನ ಬಾಟಲಿಗಳನ್ನು, ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

<><><>

ರೇಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ, ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕಿನ, ತೋವಿನಕೆರೆಯ ಜೈನ ಮಂದಿರ ಕಲ್ಯಾಣ ಮಂಟಪದಲ್ಲಿ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ ನಿಧಿ ಬಿಡುಗಡೆ ಕಾರ್ಯಕ್ರಮದಲ್ಲಿ, ಪಾಲ್ಗೊಂಡಿದ್ದರು.

<><><>

ಕೇಂದ್ರ ವಿಚಕ್ಷಣಾ ಆಯೋಗ, ಆಯೋಜಿಸಿರುವ, 'ಜಾಗೃತಿ ಅರಿವು ಸಪ್ತಾಹ 2026', ನಾಳೆ, ನವೆಂಬರ್ 1ಕ್ಕೆ, ಮುಕ್ತಾಯವಾಗಲಿದೆ. "ಸತ್ಯ ನಿ ್ಠೆಯಿಂದ ಸಮೃದ್ಧಿ" ಧ್ಯೇಯದೊಂದಿಗೆ, ಸರ್ದಾರ ವಲ್ಲಭ ಭಾಯಿ ಪಟೇಲ ಅವರ, ಜನ್ಮದಿನದ ಅಂಗವಾಗಿ, ಆಯೋಜಿತ ಈ ಅಭಿಯಾನದ ಭಾಗವಾಗಿ, ನಾಗರಿಕರು, 'MyGov CVC Pledge' ಮೂಲಕ, ಆನ್‌ಲೈನ್‌ನಲ್ಲಿ ಪ್ರತಿಜ್ಞೆ ಸ್ವೀಕರಿಸಲು, ಕೋರಲಾಗಿದೆ. ನವೆಂಬರ್ 16ರ ವರೆಗೆ, ಮೂರು ತಿಂಗಳ ಅವಧಿಯ, 'ಪೂರ್ವತಡೆ ವಿಚಕ್ಷಣಾ ಅಭಿಯಾನ' ಜರುಗಲಿದೆ.

<><><>

ಉಡುಪಿ ಜಿಲ್ಲಾ ಪಂಚಾಯಿತಿ, ಸಂಪನ್ಮೂಲ ಕೇಂದ್ರದಲ್ಲಿ, ಇಂದು ಜವಳಿ ವಲಯದ ರಫ್ತು ಉದ್ದಿಮೆದಾರರಿಗೆ, ರಫ್ತು ಪ್ರೋತ್ಸಾಹ ಕಾರ್ಯಾಗಾರ ನಡೆಯುತ್ತಿದೆ.

<><><>

'ವಿಕಸಿತ ಭಾರತ ಯುವ ಸಂಸತ್' ಕಾರ್ಯಕ್ರಮ, ಮೇರಾ ಯುವ ಭಾರತ ಕೇಂದ್ರ, ಚಿತ್ರದುರ್ಗದ ಡಾನ್ ಬಾಸ್ಕೋ ಪದವಿ ಮಹಾವಿದ್ಯಾಲಯದಲ್ಲಿ, ನವೆಂಬರ್ 3 ನೇ ತಾರೀಖು, ವಿದ್ಯಾರ್ಥಿಗಳಿಗಾಗಿ ಆಯೋಜಿಸಿದೆ.

<><><>

ಕೇಂದ್ರ ಸಾಮಾಜಿಕ ಭದ್ರತಾ ಮಂಡಳಿ ರಚನೆಗೊಂಡಿದ್ದು, ಅಸಂಘಟಿತ ವಲಯದ ಗಿಗ್ ಕಾರ್ಮಿಕರಿಗೆ, ಸಾಮಾಜಿಕ ಭದ್ರತೆ ಒದಗಿದಸಲು, ಕಾರ್ಯಪ್ರವೃತ್ತವಾಗಿದೆ.

<><><>

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಧಾರವಾಡ ಜಿಲ್ಲೆಯ, ಅಲ್ಪಸಂಖ್ಯಾತ ಸಮುದಾಯದ ಯುವಜನರಿಂದ, ನವೋದ್ಯಮಗಳನ್ನು ಆರಂಭಿಸಲು, ಆನ್‌ಲೈನ್ ಅರ್ಜಿ ಸಲ್ಲಿಕೆಗೆ, ಅವಕಾಶ ಕಲ್ಪಿಸಿದೆ. ನವೆಂಬರ್ 13 ಅರ್ಜಿ ಸಲ್ಲಿಸಲು ಕೊನೆ ದಿನ.

ಹೆಚ್ಚಿನ ಮಾಹಿತಿಗೆ ಜಾಲತಾಣ, eitbt.karnataka.gov.in ಗೆ ಭೇಟಿ ನೀಡಬಹುದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.